


# विश्वावसुसंवत्सरीय श्रीशङ्करजयन्तीमहोत्सवाह्वानपत्रिका

# ಶ್ರೀಶಂಕರಜಯಂತಿ ಮಹೋತ್ಸವ ಆಹ್ವಾನ ಪತ್ರಿಕೆ

# Sri Shankara Jayanti Mahotsava

## 28.4.2025 — 2.5.2025

**Sri Sri Jagadguru Shankaracharya Mahasamsthanam**
**Dakshinamnaya Sri Sharada Peetham, Sringeri - 577139**

Phone : 08265-252525/262626, 295123
Website: sringeri.net, Email: adminoffice@sringeri.net

# श्रीशङ्करजयन्तीमहोत्सवाह्वानपत्रिका

भो मान्याः सनातनवैदिकमतावलम्बिनः !

विदितमेवैतत् सर्वेषां भारतीयानामास्तिकानां लोकानां यद्दुष्कलिदोषप्रभावेण अवैदिकैरप्रतिष्ठित-पुरुषमात्रकल्पितैः परस्परप्रतिक्षेपिभिरनेकैः मताभासैः खिलीकृते परमाभ्युदयनिःश्रेयसनिदाने वैदिके सनातने धर्मे तत्त्वावधारणापटुबुद्धितया विमुह्याज्ञानपङ्कनिमग्नान् लोकान् समुद्धर्तुं करुणया भगवानुमाजानिः केरलेषु कालटीक्षेत्रे मानवरूपेण श्रीशङ्करभगवत्पादनाम्ना अवतीर्य, आसेतोरातुषाराद्रेः भारतवर्षं सर्वमटित्वा प्रगल्भैः श्रुतियुक्त्यनुभवप्रमाणमेदुरैरप्रकम्प्यै-र्वचोनिगुम्भैः पण्डितान् वैदिकसनातनमततत्त्वं प्रबोध्य, वैदिकेतराणि सर्वाण्यपि मतानि जनमानसनिलयेभ्यः समुत्सार्य, प्रतिष्ठाप्य सनातनं वैदिकं मतम् , सर्वकालं तत्परिपालनाय चतसृष्वपि दिशासु दिग्दन्तिन इव चतुरो मठान् निर्माय, तदधिपान् चतुरः स्वशिष्यवरान् विधाय, स्वीयं तेजोधाम केदारे हैमवते प्रपेद इति । तथा दक्षिणस्यां दिशि श्रीशृङ्गगिरिक्षेत्रे श्रीमद्भगवत्पादैः प्रतिष्ठापितं श्रीशारदापीठं श्रीसुरेश्वराचार्यप्रभृत्यविच्छिन्नगुरुपरम्परासमधिष्ठितं विद्योतत इति च ।

अधुना पीठेऽस्मिन् विराजमानाः अनन्तश्रीविभूषिताः **जगद्गुरवः श्रीमद्भारतीतीर्थ-महास्वामिपादाः** पीठस्यास्य मकुटायमानाः सन्ति । श्रीचरणाः प्रतिवत्सरं यथासम्प्रदायं श्रीशङ्करभगवत्पादजयन्तीमहोत्सवं दिवसपञ्चकं महता वैभवेन प्रवर्तयन्ते । ऐषमः विश्वावसुसंवत्सरे वैशाखशुक्लप्रतिपदमारभ्य पञ्चमीं यावत् (२८.४.२०२५ तः २.५.२०२५ पर्यन्तम्) श्रीशङ्करजयन्तीमहोत्सवः शृङ्गगिरौ श्रीमद्भगवत्पादसन्निधौ प्रवर्तयिष्यते । तदानीं प्रत्यहं प्रातः श्रीभगवत्पादानां मूर्तेः महान्यासपुरस्सरो रुद्राभिषेकः, सहस्रनामार्चनादिपूजाविशेषाः, चतुर्वेद-प्रस्थानत्रयभाष्य-विद्यारण्यवेदभाष्य-श्रीमच्छङ्करदिग्विजय-पारायणानि, सायं श्रीचरणानां दिव्यसन्निधौ विदुषामुपन्यासाश्च भविष्यन्ति । वैशाखशुक्लपञ्चम्यां श्रीचरणाः श्रीमच्छङ्करभगवत्पादानां पूजां विधास्यन्ति । वैशाखशुक्लषष्ठ्यां प्रातः (३.५.२०२५) **श्रीमच्छङ्करभगवत्पादमूर्तेः महारथोत्सवोऽपि भविता ।**

अस्मिन्नेव समये श्रीमठीयवेदपोषकसभया वेदविद्वत्परिषदपि प्रवर्त्यते । सेयं वेदपोषकसभा एकपञ्चाशद्वत्सरेभ्यः प्राक् श्रीमज्जगद्गुरुश्रीमदभिनवविद्यातीर्थमहास्वामिभिः वेदविद्याप्रचाराय प्रतिष्ठापिता । ततः प्रभृति प्रतिवर्षं सभयानया प्रवर्त्यमानासु वेदपरीक्षासु भारतस्य नानादिग्भ्यः समागताः नानावेदशाखासु कृतपरिश्रमाः विद्यार्थिनः भागं गृह्णन्ति । तत्र च उत्तीर्णाः विद्यार्थिनः जगद्गुरुश्रीश्रीभारतीतीर्थमहास्वामिश्रीचरणानामादेशानुसारं प्रमाणपत्र-सुयोग्यबहुमानादिवितरणपुरस्सरं सम्मान्यन्ते । ततः परमपि प्रतिवर्षं तानामन्त्र्य यथोचितसत्कारोऽपि क्रियते । षष्ठ्यां सायं वेदविद्वत्सम्माननानि, परीक्षासु उत्तीर्णेभ्यः छात्रेभ्यः श्रीजगद्गुरुचरणानां करकमलाभ्यां प्रमाणपत्रिकावितरणञ्च भविष्यन्ति । सर्वेष्वपि दिनेषु प्रातस्सायं च वेदस्वस्तिवाचनमपि भविष्यति । अपूर्वेऽस्मिन् मङ्गलतमे महोत्सवे स्वयं सन्निधाय श्रीभगवत्पादान् संसेव्य आत्मानं कृतार्थयन्त्विति सादरं निवेदयामः ।

इत्थम्

शृङ्गगिरिः
७.४.२०२५

गुरुसेवानिरतः
प. अ. मुरली
शृङ्गेरीश्रीमठीयप्रशासकः

# कार्यक्रमाः

## वैशाखशुक्लप्रतिपदमारभ्य पञ्चमीं यावत्  (२८.४.२०२५ तः २.५.२०२५ पर्यन्तम्)

**प्रत्यहं प्रातः ८ तः १२.३० घण्टापर्यन्तम्**

श्रीशङ्करभगवत्पादमूर्तेः शतरुद्राभिषेकः, सहस्रनामार्चना, चतुर्वेद-प्रस्थानत्रयभाष्य-विद्यारण्यवेदभाष्य-श्रीशङ्कर-दिग्विजयादिपारायणानि, महानीराजनम् ।

**सायं ५ तः ८ घण्टापर्यन्तम्**

जगद्गुरुश्रीश्रीविधुशेखरभारतीमहास्वामिनां दिव्यसन्निधौ – वेदस्वस्तिवाचनम् , श्रीशङ्करदिग्विजयपारायणम् , विदुषामुपन्यासाः, भगवत्पादमूर्तेः आर्तिक्यम् , अष्टावधानसेवा, प्रसादविनियोगः ।

## विदुषामुपन्यासाः

| | |
|---|---|
| **२८.४.२०२५** | श्री ज्ञानराज माणिकप्रभु महाराजः (हिंदीभाषया) |
| **२९.४.२०२५** | विद्वान् उमाकान्तभट्टः (कन्नडभाषया) |
| **३०.४.२०२५** | विद्वान् प्रवा रामकृष्णसोमयाजी (आन्ध्रभाषया) |
| **१.५.२०२५** | सेङ्गालिपुरम् ब्रह्मश्री बि. दामोदरदीक्षितः (द्रविडभाषया) |

## वैशाखशुक्लपञ्चमी श्रीशङ्करजयन्तीदिने विशेषकार्यक्रमः (२.५.२०२५)

**प्रातः ११:३० घण्टातः हरिहरनामालयस्य उद्घाटनम्**

**मध्याह्ने १२ घण्टातः २ घण्टापर्यन्तम्**

श्रीचरणानां करकमलाभ्यां श्रीशङ्करभगवत्पादमूर्तेः पूजा, महानीराजनम् , कनकाभिषेकश्च ।

सायं ५.०० वादनतः – वेदस्वस्तिवाचनम् , श्रीशङ्करदिग्विजयपारायणम् , श्रीचरणानाम् अनुग्रहभाषणम् , महानीराजनम् , अष्टावधानसेवा, प्रसादविनियोगः।

## वैशाखशुक्लषष्ठी (३.५.२०२५)

**प्रातः ८.३० घण्टातः – श्रीभगवत्पादाचार्याणां महारथोत्सवः**

सायं ५ वादनतः – श्रीचरणानामाध्यक्ष्ये सभा, वेदस्वस्तिवाचनम् , प्रास्ताविकभाषणम् , श्रीचरणानाम् अनुग्रहभाषणम् , महानीराजनम् , अष्टावधानसेवा, वेदपरीक्षासु उत्तीर्णेभ्यः छात्रेभ्यः प्रमाणपत्रवितरणम् , विद्वत्सम्माननम् , प्रसादविनियोगः ।

# ಶ್ರೀಶಂಕರಜಯಂತಿ ಮಹೋತ್ಸವ ಆಹ್ವಾನ ಪತ್ರಿಕೆ

ಆಸ್ತಿಕ ಭಕ್ತ ಮಹನೀಯರೇ,

ಸುಮಾರು ಹನ್ನೆರಡು ಶತಮಾನಗಳ ಹಿಂದೆ ನಮ್ಮ ಭರತಖಂಡದಲ್ಲಿ ಅವೈದಿಕ ಮತಗಳು ಹೆಚ್ಚಾಗಿ ಸನಾತನ ವೈದಿಕ ಧರ್ಮವು ಬಹಳ ಹೀನಸ್ಥಿತಿಯನ್ನು ತಲುಪಿದಾಗ ಸಕಲ ದೇವತೆಗಳಿಂದ ಪ್ರಾರ್ಥಿತನಾದ ಕೈಲಾಸವಾಸಿಯಾದ ಪರಮೇಶ್ವರನು ಕೇರಳದಲ್ಲಿ ಕಾಲಟೀ ಕ್ಷೇತ್ರದಲ್ಲಿ ಆರ್ಯಾಂಬಾ-ಶಿವಗುರುಗಳೆಂಬ ಪುಣ್ಯದಂಪತಿಗಳಿಗೆ ಪುತ್ರನಾಗಿ ಶ್ರೀಶಂಕರ ನಾಮಧೇಯದಿಂದ ಅವತರಿಸಿ, ಬಾಲ್ಯದಲ್ಲಿಯೇ ಸಕಲ ವೇದಶಾಸ್ತ್ರಗಳಲ್ಲಿ ಅಗಾಧವಾದ ಪಾಂಡಿತ್ಯವನ್ನು ಹೊಂದಿ, ಭಾರತದ ಉದ್ದಗಲಕ್ಕೂ ಸಂಚರಿಸಿ, ಅವೈದಿಕ ಮತಗಳೆಲ್ಲವನ್ನೂ ಖಂಡಿಸಿ, ವೈದಿಕ ಧರ್ಮವನ್ನು ಪುನರುದ್ಧರಿಸಿ, ಪ್ರಸ್ಥಾನತ್ರಯ ಭಾಷ್ಯಗಳಾದಿಯಾಗಿ ಅನೇಕ ಗ್ರಂಥಗಳನ್ನು ರಚಿಸಿ, ಔಪನಿಷದವಾದ ಅದ್ವೈತ ಸಿದ್ಧಾಂತವನ್ನು ಎಲ್ಲರಿಗೂ ಬೋಧಿಸಿ, ಈ ಧರ್ಮವು ನಿರಂತರವಾಗಿ ಪ್ರಚಾರದಲ್ಲಿರಬೇಕೆಂಬ ಮಹೋದ್ದೇಶದಿಂದ ಭಾರತದ ನಾಲ್ಕು ದಿಕ್ಕುಗಳಲ್ಲಿ ನಾಲ್ಕು ಆಮ್ನಾಯ ಪೀಠಗಳನ್ನು ಸ್ಥಾಪಿಸಿ, ಕಾಶ್ಮೀರದಲ್ಲಿ ಸರ್ವಜ್ಞ ಪೀಠವನ್ನಧಿರೋಹಿಸಿ, ಕೇದಾರ ಕ್ಷೇತ್ರದಲ್ಲಿ ಅಂತರ್ಧಾನ ಹೊಂದಿರತಕ್ಕ ವಿಷಯವು ಸಕಲ ಜಗದ್ವಿದಿತವೇ ಆಗಿದೆ.

ಭಗವತ್ಪಾದರಿಂದ ಶೃಂಗೇರಿ ಕ್ಷೇತ್ರದಲ್ಲಿ ಪವಿತ್ರತುಂಗಾ ತೀರದಲ್ಲಿ ಸ್ಥಾಪಿತವಾದ ದಕ್ಷಿಣಾಮ್ನಾಯ ಶ್ರೀಶಾರದಾಪೀಠವು ಶ್ರೀಸುರೇಶ್ವರಾಚಾರ್ಯರಿಂದ ಇಂದಿನವರೆಗೆ ಅವಿಚ್ಛಿನ್ನವಾದ ಗುರುಪರಂಪರೆಯಿಂದ ಕಂಗೊಳಿಸುತ್ತಿದೆ. ಪ್ರಸ್ತುತ ಪೀಠಾಧಿಪತಿಗಳಾದ ಜಗದ್ಗುರು ಶಂಕರಾಚಾರ್ಯ ಶ್ರೀಶ್ರೀಭಾರತೀತೀರ್ಥ ಮಹಾಸ್ವಾಮಿಗಳವರು ಸಕಲಶಾಸ್ತ್ರನಿಷ್ಣಾತರಾಗಿ ಪೂರ್ವಾಚಾರ್ಯರ ಮೇಲ್ಪಂಕ್ತಿಯನ್ನನುಸರಿಸಿ ಸಂಪ್ರದಾಯ ಪರಿಪಾಲನಾನಿರತರಾಗಿ ಸಕಲಾಸ್ತಿಕಜನವಂದ್ಯರಾಗಿದ್ದಾರೆ. ಹಿಂದಿನ ಪದ್ಧತಿಯಂತೆ ಈ ಪೀಠದಲ್ಲಿ ಪ್ರತಿವರ್ಷವೂ ವೈಶಾಖ ಶುದ್ಧ ಪಾಡ್ಯದಿಂದ ಪಂಚಮಿಯವರೆಗೆ ಶ್ರೀಮಚ್ಛಂಕರಭಗವತ್ಪಾದರ ಜಯಂತ್ಯುತ್ಸವವು ಬಹಳ ವೈಭವದಿಂದ ಆಚರಿಸಲ್ಪಡುತ್ತಿದೆ.

ಈ ವಿಶ್ವಾವಸು ಸಂವತ್ಸರದಲ್ಲಿ ಶಂಕರ ಜಯಂತ್ಯುತ್ಸವವನ್ನು **ಜಗದ್ಗುರು ಶಂಕರಾಚಾರ್ಯ ಶ್ರೀಶ್ರೀಭಾರತೀತೀರ್ಥ ಮಹಾಸ್ವಾಮಿಗಳವರು** ಶೃಂಗೇರಿ ಕ್ಷೇತ್ರದಲ್ಲಿರುವ ಭವ್ಯವೂ, ರಮಣೀಯವೂ, ಆದ ಶ್ರೀಶಂಕರ ಭಗವತ್ಪಾದಾಚಾರ್ಯರ ಶಿಲಾಮಯ ಮಂದಿರದಲ್ಲಿ ಆಚರಿಸಲು ತೀರ್ಮಾನಿಸಿರುತ್ತಾರೆ. ಈ ಸಂದರ್ಭದಲ್ಲಿ ಪ್ರತಿವರ್ಷದಂತೆ ಶ್ರೀಶಂಕರ ಭಗವತ್ಪಾದಾಚಾರ್ಯರ ಸನ್ನಿಧಿಯಲ್ಲಿ ಪೂಜೆ, ಚತುರ್ವೇದ-ವಿದ್ಯಾರಣ್ಯವೇದಭಾಷ್ಯ-ಶ್ರೀಮಾಧವೀಯ ಶಂಕರ ದಿಗ್ವಿಜಯ ಪಾರಾಯಣಗಳು ನಡೆಯಲಿವೆ. ಶಂಕರಜಯಂತಿಯಂದು (2.5.2025) ಶ್ರೀಶ್ರೀಜಗದ್ಗುರು ಮಹಾಸ್ವಾಮಿಗಳವರು ತಮ್ಮ ಅಮೃತಹಸ್ತದಿಂದ ಶ್ರೀಶಂಕರಭಗವತ್ಪಾದಾಚಾರ್ಯರಿಗೆ ವಿಶೇಷ ಪೂಜೆಯನ್ನು ನೆರವೇರಿಸುತ್ತಾರೆ. ಮರುದಿನ (3.5.2025) ವೈಶಾಖ ಶುದ್ಧ ಷಷ್ಠಿಯಂದು **ಶ್ರೀಭಗವತ್ಪಾದಾಚಾರ್ಯರಿಗೆ ಮಹಾರಥೋತ್ಸವವು** ನಡೆಯುತ್ತದೆ.

ಇದೇ ಸಮಯದಲ್ಲಿ ಶ್ರೀಮಠದ ವೇದಪೋಷಕ ಸಭೆಯು ವೇದವಿದ್ವತ್ಪರಿಷತ್ತನ್ನು ನಡೆಸುತ್ತದೆ. ಈ ವೇದಪೋಷಕ ಸಭೆಯನ್ನು ಐವತ್ತೊಂದು ವರ್ಷಗಳ ಹಿಂದೆ ಜಗದ್ಗುರು ಶ್ರೀ ಅಭಿನವ ವಿದ್ಯಾತೀರ್ಥ ಮಹಾಸ್ವಾಮಿಗಳವರು ವೇದವಿದ್ಯೆಯನ್ನು ಪ್ರಚಾರ ಮಾಡುವ ಉದ್ದೇಶದಿಂದ ಸ್ಥಾಪಿಸಿದರು. ಅಂದಿನಿಂದ, ಭಾರತದ ವಿವಿಧ ಭಾಗಗಳಿಂದ ವೇದಗಳ ವಿವಿಧ ಶಾಖೆಗಳ ಅಧ್ಯಯನವನ್ನು ಮಾಡಿರುವ ವಿದ್ಯಾರ್ಥಿಗಳು ಪ್ರತಿವರ್ಷ ಸಭೆಯಿಂದ ನಡೆಸಲಾಗುವ ವೇದ ಪರೀಕ್ಷೆಗಳಲ್ಲಿ ಭಾಗವಹಿಸುತ್ತಾರೆ. ಪರೀಕ್ಷೆಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ಜಗದ್ಗುರು ಶ್ರೀಶ್ರೀ ಭಾರತೀತೀರ್ಥ ಮಹಾಸ್ವಾಮಿಗಳವರ ಆದೇಶದಂತೆ ಪ್ರಮಾಣಪತ್ರ ಮತ್ತು ಸುಯೋಗ್ಯವಾದ ಬಹುಮಾನಾದಿಗಳನ್ನು ನೀಡಿ ಗೌರವಿಸಲಾಗುತ್ತದೆ. ತದನಂತರವೂ ಪ್ರತಿ ವರ್ಷ ಆ ಪಂಡಿತರನ್ನು ಆಹ್ವಾನಿಸಿ ಸೂಕ್ತವಾದ ಸತ್ಕಾರವನ್ನೂ ಸಹ ಮಾಡಲಾಗುತ್ತದೆ. ಷಷ್ಠಿಯ ಸಾಯಂಕಾಲ ವೇದವಿದ್ವಾಂಸರಿಗೆ ಸನ್ಮಾನ ಮತ್ತು ಪರೀಕ್ಷೆಗಳಲ್ಲಿ ಉತ್ತೀರ್ಣರಾದವರಿಗೆ ಪ್ರಮಾಣಪತ್ರವನ್ನು ಶ್ರೀಶ್ರೀಗಳವರ ಅಮೃತಹಸ್ತಗಳಿಂದ ನೀಡಲಾಗುತ್ತದೆ. ಆಸ್ತಿಕ ಭಕ್ತ ಮಹನೀಯರೆಲ್ಲರೂ ಶ್ರೀಜಗದ್ಗುರು ಮಹಾಸ್ವಾಮಿಗಳವರ ದಿವ್ಯ ಸಮ್ಮುಖದಲ್ಲಿ ನಡೆಯುವ ಅತ್ಯಂತ ಪುಣ್ಯಪ್ರದವಾದ ಈ ಮಹೋತ್ಸವಗಳಲ್ಲಿ ಪಾಲ್ಗೊಂಡು ಶ್ರೇಯೋವಂತರಾಗಬೇಕಾಗಿ ಈ ಮೂಲಕ ವಿನಂತಿಸಿಕೊಳ್ಳುತ್ತಿದ್ದೇವೆ.

ಗುರುಸೇವಾ ನಿರತ
ಪಿ. ಎ. ಮುರಳಿ
ಆಡಳಿತಾಧಿಕಾರಿಗಳು, ಶ್ರೀಮಠ ಶೃಂಗೇರಿ

ಸ್ಥಳ – ಶೃಂಗೇರಿ
ದಿನಾಂಕ – 7.4.2025

# ಕಾರ್ಯಕ್ರಮಗಳು

## ವೈಶಾಖ ಶುಕ್ಲ ಪಾಡ್ಯದಿಂದ ಪಂಚಮಿವರೆಗೆ (28.4.2025 - 2.5.2025)

ಪ್ರತಿದಿನ ಬೆಳಿಗ್ಗೆ 8:00 ಘಂಟೆಯಿಂದ 12:30 ರ ವರೆಗೆ – ಶ್ರೀಶಂಕರ ಭಗವತ್ಪಾದರ ಮೂರ್ತಿಗೆ ಮಹಾನ್ಯಾಸ ಪೂರ್ವಕ ಶತರುದ್ರಾಭಿಷೇಕ, ಸಹಸ್ರ ನಾಮಾರ್ಚನೆ, ಚತುರ್ವೇದ – ಪ್ರಸ್ಥಾನತ್ರಯಭಾಷ್ಯ – ವಿದ್ಯಾರಣ್ಯವೇದಭಾಷ್ಯ – ಶ್ರೀಶಂಕರ ದಿಗ್ವಿಜಯ ಮೊದಲಾದ ಪಾರಾಯಣಗಳು, ಮಹಾಮಂಗಳಾರತಿ.

ಸಂಜೆ 5 ಘಂಟೆಯಿಂದ 8 ರ ವರೆಗೆ – ಜಗದ್ಗುರು ಶ್ರೀಶ್ರೀ ವಿಧುಶೇಖರ ಭಾರತೀ ಸನ್ನಿಧಾನಂಗಳವರ ದಿವ್ಯ ಸಾನ್ನಿಧ್ಯದಲ್ಲಿ – ವೇದ ಸ್ವಸ್ತಿವಾಚನ, ಶ್ರೀಶಂಕರ ದಿಗ್ವಿಜಯ ಪಾರಾಯಣ, ವಿದ್ವಾಂಸರಿಂದ ಉಪನ್ಯಾಸ, ಭಗವತ್ಪಾದರ ಮೂರ್ತಿಗೆ ಮಹಾಮಂಗಳಾರತಿ, ಅಷ್ಟಾವಧಾನಸೇವೆ, ಪ್ರಸಾದ ವಿನಿಯೋಗ.

## ವಿದ್ವಾಂಸರಿಂದ ಉಪನ್ಯಾಸ

| | |
|---|---|
| **28.4.2025** | ಶ್ರೀ ಜ್ಞಾನರಾಜ ಮಾಣಿಕಪ್ರಭು ಮಹಾರಾಜರು (ಹಿಂದಿ) |
| **29.4.2025** | ವಿದ್ವಾನ್ ಉಮಾಕಾಂತ ಭಟ್ಟರು (ಕನ್ನಡ) |
| **30.4.2025** | ವಿದ್ವಾನ್ ಪ್ರವಾ ರಾಮಕೃಷ್ಣ ಸೋಮಯಾಜೀಗಳು (ತೆಲಗು) |
| **1.5.2025** | ಸೇಂಗಾಲಿಪುರಂ ಬ್ರಹ್ಮಶ್ರೀ ಬಿ. ದಾಮೋದರ ದೀಕ್ಷಿತರು (ತಮಿಳು) |

## ವೈಶಾಖ ಶುಕ್ಲ ಪಂಚಮಿ (2.5.2025)
## ಶ್ರೀಶಂಕರ ಜಯಂತಿಯಂದು ವಿಶೇಷ ಕಾರ್ಯಕ್ರಮ

**ಬೆಳಗ್ಗೆ 11.30 ಘಂಟೆಗೆ ಹರಿಹರನಾಮಾಲಯದ ಉದ್ಘಾಟನೆ**

**ಮಧ್ಯಾಹ್ನ 12 ಘಂಟೆಯಿಂದ 2 ರ ವರೆಗೆ – ಶ್ರೀಶ್ರೀಜಗದ್ಗುರು ಮಹಾಸ್ವಾಮಿಗಳವರ ಅಮೃತಹಸ್ತಗಳಿಂದ ಶ್ರೀಶಂಕರಭಗವತ್ಪಾದಾಚಾರ್ಯರಿಗೆ ವಿಶೇಷಪೂಜೆ, ಮಹಾಮಂಗಳಾರತಿ, ಕನಕಾಭಿಷೇಕ.**

ಸಂಜೆ 5 ಘಂಟೆಗೆ – ವೇದ ಸ್ವಸ್ತಿವಾಚನ ಮತ್ತು ಶ್ರೀಶಂಕರ ದಿಗ್ವಿಜಯ ಪಾರಾಯಣ, ಶ್ರೀಶ್ರೀಜಗದ್ಗುರು ಸನ್ನಿಧಾನಂಗಳವರ ಅನುಗ್ರಹ ಭಾಷಣ, ಭಗವತ್ಪಾದರ ಮೂರ್ತಿಗೆ ಮಹಾಮಂಗಳಾರತಿ, ಅಷ್ಟಾವಧಾನಸೇವೆ, ಪ್ರಸಾದ ವಿನಿಯೋಗ.

## ವೈಶಾಖ ಶುಕ್ಲ ಷಷ್ಠಿ (3.5.2025)

**ಪ್ರಾತಃ 8.30 ಘಂಟೆಗೆ – ಶ್ರೀಶ್ರೀಗಳವರ ದಿವ್ಯಸಾನ್ನಿಧ್ಯದಲ್ಲಿ ಶ್ರೀಮಚ್ಛಂಕರಭಗವತ್ಪಾದಾಚಾರ್ಯರ ಮಹಾರಥೋತ್ಸವ**

ಸಂಜೆ 5 ಘಂಟೆಯಿಂದ – ಶ್ರೀಶ್ರೀಜಗದ್ಗುರು ಮಹಾಸ್ವಾಮಿಗಳವರ ಅಧ್ಯಕ್ಷತೆಯಲ್ಲಿ ಸಭೆ, ಪ್ರಾಸ್ತಾವಿಕನುಡಿಗಳು, ಶ್ರೀಶ್ರೀಜಗದ್ಗುರು ಮಹಾಸ್ವಾಮಿಗಳವರ ಅನುಗ್ರಹ ಭಾಷಣ, ಭಗವತ್ಪಾದರ ಮೂರ್ತಿಗೆ ಮಹಾಮಂಗಳಾರತಿ, ಅಷ್ಟಾವಧಾನಸೇವೆ, ವೇದಪರೀಕ್ಷೆಗಳಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ಪ್ರಮಾಣಪತ್ರ ವಿತರಣೆ, ವಿದ್ವತ್ಸಮ್ಮಾನ.

# Sri Shankara Jayanti Mahotsava

Today we are the followers of Sanatana Dharma only because of the relentless efforts of Jagadguru Sri Adi Shankaracharya, the incarnation of Lord Paramashiva. Twelve centuries ago, the great Acharya spread the Upanishadic import of Advaita touring all over the country. With great foresight, Sri Adi Shankaracharya established four Amnaya Peethams in the four directions of India. Among these, the Dakshinamnaya Sri Sharada Peetham established at Sringeri has been adorned by an unbroken succession of illustrious Gurus right from Sri Adi Shankaracharya's direct disciple, Sri Sureshwaracharya. The lives of the Acharyas and their efforts to continue the mission of Sri Adi Shankaracharya are remarkable and unique. By their own conduct and by their discourses, the Acharyas of the Peetham teach Dharma and instill the need for paying gratitude to Sri Adi Shankaracharya among the masses.

This year, **Jagadguru Shankaracharya Sri Sri Bharati Tirtha Mahasannidhanam** will celebrate Sri Shankara Jayanti of the Vishwavasu Samvatsara in Sringeri from April 28, 2025 to May 2, 2025. The programme includes Special Poojas at the shrine of Sri Shankara Bhagavatpadacharya in the mornings and Pravachanams in the august presence of Jagadguru Mahaswamiji in the evenings. Parayana of the Vedas and Sri Vidyaranya Veda Bhashya will be conducted in the morning and evening on all these days.

As part of the Celebrations, the Veda Poshaka Sabha of the Sringeri Math will conduct a conference of Vedic scholars. This Sabha was commenced 51 years ago by the 35th Acharya of the Peetham, Jagadguru Shankaracharya Sri Sri Abhinava Vidyatirtha Mahaswamiji for the propagation of Vedic knowledge. Since then, students belonging to various Veda Shakhas from all over the country have been participating in the Veda Pareeksha conducted by the Sabha. Successful candidates have been honoured with certificates and cash awards as per the instruction of Jagadguru Shankaracharya Sri Sri Bharati Tirtha Mahaswamiji. Such scholars who have passed the exam are invited every year and honoured.

On the Shashti day (May 3, 2025), there will be a **Splendid Rathotsava of Jagadguru Sri Adi Shankaracharya.** The same evening, honours to Vedic scholars and certificates to successful students will be conferred by Jagadguru Mahaswamiji.
We request all devotees to participate in this auspicious Shankara Jayanti celebrations and be the recipient of the benign blessings of the Jagadguru.

Sringeri
7.4.2025

Guru Seva Nirata
P. A. Murali
Administrator & CEO
Sri Sringeri Math and its Properties

# PROGRAMME

## From Vaishakha Shukla Prathama to Panchami (28.4.2025 to 2.5.2025)

**Morning: 8 a.m. to 12 p.m.** Mahanyasa Poorvaka Shatarudrabhisheka to the Murti of Sri Adi Shankaracharya, Sahasranama Archana, Parayana of the four Vedas, Prasthanatraya Bhashya, Vidyaranya Veda Bhashya and Sri Madhaviya Shankara Digvijaya; followed by Mahamangala Arati

**Evening: 5 p.m. to 8 p.m.** Recitation of Vedas followed by Sri Madhaviya Shankara Digvijaya Parayana & expositions by scholars in the divine presence of Jagadguru Sri Sri Vidhushekhara Bharati Sannidhanam, Mangala Arati to Jagadguru Sri Adi Shankaracharya, Ashtavadhana Seva and distribution of Prasada

## Expositions by scholars

| | |
|---|---|
| **28.4.2025** | Shri Dnyanraj Manik Prabhu Maharaj (Hindi) |
| **29.4.2025** | Vidwan Sri Umakanta Bhat (Kannda) |
| **30.4.2025** | Vidwan Sri Prava Ramakrishna Somayaji (Telugu) |
| **1.5.2025** | Sengalipram Brahmashri B. Damodara Dikshitar (Tamil) |

## Vaishakha Shukla Panchami - Sri Shankara Jayanti (2.5.2025)

**11:30 a.m. Inauguration of Harihara Namaalayam**

**12:00 p.m. Special Pooja and Kanakabhisheka to Jagadguru Sri Adi Shankaracharya will be performed by the Jagadguru Mahaswamiji**

**Evening: 5.00 p.m.** Recitation of Vedas, Sri Madhaviya Shankara Digvijaya Parayana, Anugraha Bhashanam by Jagadguru Sri Sri Vidhushekhara Bharati Sannidhanam, Mangala Arati to Jagadguru Sri Adi Shankaracharya, Ashtavadhana Seva and distribution of Prasada

## Vaishakha Shukla Shashti (3.5.2025)

**Morning: 8.30 a.m. Rathotsava of Jagadguru Sri Adi Shankaracharya in the divine presence of the Jagadguru Mahaswamiji**

**Evening : 5 p.m.** Recitation of Vedas, Anugraha Bhashanam by the Jagadguru Mahaswamiji, Mangala Arati to Jagadguru Sri Adi Shankaracharya, Ashtavadhana Seva, certificates to successful candidates, honouring of scholars and distribution of Prasada.



Sri Mahasannidhanam and Sri Sannidhanam performing Kanakabhisheka to the Murti of Jagadguru Sri Adi Shankaracharya